Regd. No M. 1299 SATYAVADI Founded 1917

ಸತ್ಯವಾದಿ

(ಅಲಮನೆ ಸಿರಸ್ತೇದಾರ್ ಎಂ. ವಿ. ಸುಬ್ಬಿರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 30 ಸಂಚಿಕೆ 241 | ಗುರುವಾರ 22—5—47 | ಬಿಡಿ ಪ್ರತಿ 3 ಪೈ

ಧ- ಯು. ಸೆ. ಬುಲೆಟಿನ್ ಸಂ. 4

ಪ್ರಾಣವನ್ನೇ ಪಣಕ್ಕಿಟ್ಟು ಧರ್ಮಯುದ್ಧಕ್ಕಿಳಿಯಿರಿ

ಶ್ರೀ ಸ್ವಾಮಿ ಕರಪಾತ್ರಜೀಯವರ ಸಂದೇಶ

ಪ್ರಚಾರಕ—ರಾಜಶ ಎಸ್ ಗುರುರಾಜಾಚಾರ್ಯ. ಅಖಿಲ ಕರ್ನಾಟಕ ಸನಾತನಿಗಳ ಸಂಘ, ಮಂತ್ರಾಲಯ.

ಜೈಲಿಗೆ ಹೋಗುವ ಮೊದಲು ಶ್ರೀ ಸ್ವಾಮೀಜಿಯವರು ಪ್ರಚಂಡ ಜನ ಸಮೂಹಕ್ಕೆ ಈ ರೀತಿ ಹೇಳಿದರು— ಸತ್ಯ ಮತ್ತು ಅಹಿಂಸೆಗಳ ಈಗಿನ ಪೂಜಾರಿಗಳು ಪ್ರಜಾಸತ್ತಾತ್ಮಕವಾದ ಭಾರತದ ರಾಮರಾಜ್ಯದಲ್ಲಿ ಎಲ್ಲರೊಡನೆಯೂ ನ್ಯಾಯೋಚಿತ ವ್ಯವಹಾರವನ್ನು ನಡೆಸಲಾಗುವುದು. ಎಂದು ಪುನಃ ಪುನಃ ಧರಪಸಿ ಕೊಟ್ಟಿದ್ದರು. ದೌರ್ಭಾಗ್ಯದಿಂದ ಇಂದು ಆ ಧರವಸೆಯು ಹಸ್ಯವೇ ನಡೆಯುತ್ತಿದೆ. ಸನಾತನಧರ್ಮದಲ್ಲಿ ಕೈ ಹಾಕಬೇಡಿರೆಂದು ಸನಾತನಿಗಳು ಅನೇಕ ಪುನಃ ಪುನಃ ವಿನಯಾನುನಯದೊಡನೆ ಪ್ರಾರ್ಥಿಸಿದರು ಅಧಿಕಾರಿಗಳಿಗೆ ಮನವಿಗಳನ್ನು (ಮೆಮೊರಾಂಡಂ ಕಳಿಸಿದರು. ಆದರವರು ಅವೊಂದನ್ನೂ ಗಣನಿಸಲಿಲ್ಲ) ತೀವ್ರ ವಿರೋಧವಿದ್ದರೂ ಮಂದಿರ ಪ್ರವೇಶ ಕಾನೂನನ್ನು ಜಾರಿಗೆ ತಂದು ಇದನ್ನು ಹಿಂದೂಗಳ ತಲೆಗೆ ಕಟ್ಟಿದ್ದಾರೆ ಮುಸ್ಲಿಂ. ಸಿಕ್, ಕ್ರೈಸ್ತ ಮೊದಲಾದ ಕೋಮುಗಳ ಧಾರ್ಮಿಕ ವಿಷಯದಲ್ಲಿ ಎಳ್ಳಷ್ಟಾದರೂ ಹಸ್ತಕ್ಷೇಪ ಮಾಡಲಸವರ್ಥರಾದರೂ ಹಿಂದೂಗಳ ಮೇಲೆ ಮಾತ್ರ ತಮ್ಮ ಪಾರುಷ ತೋರಿಸುತ್ತಿರುವುದು ಹೇಡಿತನವೇ ಸರಿ! ಸ್ವಾತಂತ್ರ್ಯವನ್ನು ಕೊಟ್ಟು ಪ್ರಾಂತ್ಯಗಳನ್ನು ನಿರಂಕುಶ ನೂಡಲಾಯಿತು. ಈಗ ಕೇಂದ್ರದಲ್ಲಿ ಅನುಚಿತ ಪ್ರತಿನಿಧಿತ್ವ ಸಿಕ್ಕಿದ್ದರಿಂದ ಒಂದಾನೊಂದು ಕಾಲದಲ್ಲಿ ಸ್ವಚ್ಛವಾಗಿ ಕಾಣುತ್ತಿದ್ದ ಪಾಕೇಸ್ತಾನವು ಇಂದು ಸತ್ಯವಾಗಿ ಕಂಡು ಬರುತ್ತಿದೆ.

ಇಂದಿನ ಭಯಂಕರ ಸರಯಜ್ಞ ಹತ್ಯಾಕಾಂಡ ಮತ್ತು ಲೂಟಿಗಳಿಗೆಲ್ಲಾ ಕೇಂದ್ರದ ನಿರ್ಬಲತೆಯೇ ಕಾರಣ! ಹಿಂದೂಧರ್ಮದ ಹಾಗೂ ಸಂಸ್ಕೃತಿಯ ರಕ್ಷಕರ ಒಬ್ಬ ಪ್ರತಿನಿಧಿಯೂ ಇಲ್ಲದ ಇಂದಿನ ಅಧಿಕಾರವರ್ಗವು ಮಾಡುವ ಶಾಸನ ವಿಧಾನದಿಂದ ಹಿಂದೂಗಳ ಅಥವಾ ಭಾರತದ ಯಾವತ್ತಾರ ನಿಜವಾಗಿ ಆ ಗುವುದೇ? ಇಂದು ಧರ್ಮದ ಮೂಲಕ್ಕೆ ಕುಠಾರ ಹಾಕಲಾಗಿದೆ ಇದನ್ನು ತಡೆಗಟ್ಟಬೇಕಾದ್ದು ಪ್ರತಿಯೊಬ್ಬ ಹಿಂದೂವಿನ ಕರ್ತವ್ಯವಾಗಿದೆ. ಈ ದೃಷ್ಟಿಯಿಂದ ಧರ್ಮಯುದ್ಧವು ಅನಿವಾರ್ಯವಾದುದರಿಂದ ನಾವು ಧರ್ಮಯುದ್ಧವನ್ನು ಘೋಷಿಸಬೇಕಾಯಿತು. ಹಿಂದೂಗಳ ಕೂಗನ್ನೇ ಮುಟ್ಟಹಾಕುವ ಪ್ರಯತ್ನ ನಡೆಯುತ್ತಿದೆ. ಆದ್ದರಿಂದ ಹಿಂದೂಗಳು ಉಳಿಯಬೇಕಾಗಿದ್ದರೆ ಪ್ರಾಣವನ್ನೇ ಪಣವಾಗಿಟ್ಟು ಧರ್ಮರಕ್ಷಣೆಗಾಗಿ ಸತ್ಯಾಗ್ರಹದಲ್ಲಿ ಭಾಗಿಗಳಾಗುವುದು ಒಂದೇ ಇಂದು ಹಿಂದೂಗಳಿಗುಳಿದಿರುವ ಏಕಮಾತ್ರ ಉಪಾಯ ಮತ್ತು ಕರ್ತವ್ಯವಾಗಿದೆ.

ದೇಶದಲ್ಲಿ ವಿಕ್ಷೋಭ

ಕಾಶಿ— ಇಲ್ಲಿ ಕಂಟೋನ್ಮೆಂಟ್, ಲಕ್ಷ್ಮಿ ಜಾತರಾ, ಜೈತ್‌ಪುರ ಮೊದಲಾದ ಪೇಟೆಗಳಲ್ಲಿ ಎಲ್ಲ ಅಂಗಡಿಗಳೂ ಮುಚ್ಚಲ್ಪಟ್ಟಿವೆ. ಎಲ್ಲಕಡೆಯೂ ಶ್ರೀ ಕರಪಾತ್ರಜೀಯವರ ಬಂಧನವನ್ನು ಖಂಡಿಸಿ ಹರತಾಳ ನಡೆಯುತ್ತಿದೆ. ಕಾಶೀ ಸನಾತನ ಹಿಂದೂ ಸಭಾ, ರಾಜಸ್ಥಾನ ಸಂಸ್ಕೃತ ಕಾಲೇಜು ಹಿಂದೂ ವಿಶ್ವವಿದ್ಯಾಲಯಗಳ ಸಂಘಾಗಿ ಸ್ವಾಮೀಜೀಯವರನ್ನು ದಸ್ತಗಿರಿ ಮಾಡಿದ್ದಕ್ಕೆ ಸಂತಾಪವನ್ನು ಸೂಚಿಸಿ, ಕೂಡಲೇ ಬಿಡುಗಡೆ ಮಾಡಬೇಕೆಂದು ವೈಸರಾಯರಿಗೂ ಪಂ॥ ನೆಹರೂರವರಿಗೂ ತಂತಿ ಕಳುಹಿಸಲಾಗಿದೆ.

ಮಿರಾತ್— ಶ್ರೀ ಸ್ವಾಮೀಜಿಯವರು ದಸ್ತಗಿರಿಯಾದ ರಾತ್ರಿ ಸಾರ್ವಜನಿಕ ಸಭೆ ಸೇರಿದು ಸರ್ಕಾರದ ದಬ್ಬಾಳಿಕೆಯನ್ನು ಖಂಡಿಸಲಾಯಿತು.

ದೇವರಿಯಾದಲ್ಲಿ ಹರತಾಳ

ಸರ್ಕಾರದ ನೀತಿಯಿಂದ ಜನರು ಕ್ಷೋಭಗೊಂಡು ನಗರದಲ್ಲಿ ಪೂರ್ಣ ಹರತಾಳವನ್ನಾಚರಿಸಿ ಶ್ರೀ ಸ್ವಾಮೀಜಿಯವರನ್ನು ಬಂಧಿಸಿದ್ದಕ್ಕಾಗಿ ಸರಕಾರವನ್ನು ತೀವ್ರವಾಗಿ ಖಂಡಿಸಲಾಯಿತು.

ಗುಂಡು ಹೊಡೆದು ಸಾಯಿಸಲಾಯಿತು

ಮದರಾಸು, ಮೇ 20 — ಸೆಂಟ ಥಾಮಸ್ ಮೈ ಮೌಂಟಿನಲ್ಲಿ ವಾಸವಾಗಿದ್ದ ಬಿನ್ನಿಮಿಲ್ ಅಸಿಸ್ಟೆಂಟು ವಿ॥ ಹಿಲ್ಟನ್ನರ ಬಂಗಲೆಗೆ ರಾತ್ರೆ 8—30 ಕ್ಕೆ ಒಬ್ಬ ಶಸ್ತ್ರ ಸಜ್ಜಿತ ಮನುಷ್ಯನು ನುಗ್ಗಿ ಹಣ ಕೊಡು ಎಂದು ಅತನ ಹೆಂಡತಿ ವ.ಗ ವ.ತ್ತು ಅತನನ್ನು ಕೇಳಲು ಅವರು ಕೊಡದೆ ಇವನನ್ನು ಹೊಂಗ್ಸೆ ಹೋಗುವಂತೆ ತಿಳಿಸಿದರು. ಆಗ ಆಗಂತನು ಹಿಲ್ಟನ್ನರನ್ನು ಗುಂಡಿಕ್ಕಿ ಸಾಯಿಸಿ ಪರಾರಿಯಾದನು

ಹರತಾಳವನ್ನಾಚರಿಸಿ ಶ್ರೀ ಸ್ವಾಮೀಜಿಯವರನ್ನು ಬಂಧಿಸಿದ್ದಕ್ಕಾಗಿ ಸರಕಾರವನ್ನು ತೀವ್ರವಾಗಿ ಖಂಡಿಸಲಾಯಿತು.

ಬಳ್ಳಾರಿಯಲ್ಲಿ

ಇಲ್ಲಿ ಶ್ರೀ ಲಕ್ಷ್ಮೀನಾರಾಯಣ ಗುಡಿಯಲ್ಲಿ ಸನಾತನಿಗಳ ಪ್ರಚಂಡ ಸಭೆ ಸೇರಿತ್ತು. ಅಡ್ವೊಕೇಟ್ ದ.ಡ್ಡಿ ಗೋವಿಂದರಾಯರು ಅಧ್ಯಕ್ಷತೆ ವಹಿಸಿದ್ದರು ಸಭೆಯಲ್ಲಿ ಪಂ॥ ಸಟ್ಟರಾಜ ರಾಜ ಶಾಸ್ತ್ರಿಗಳು, ವಿ ಎಂ. ಗಿರಿ, ಮತ್ತು ಅಖಿಲ ಕರ್ನಾಟಕ ಸನಾತನಿಗಳ ಸಂಘದ ಕಾರ್ಯಮಂಡಲ ಸದಸ್ಯರಾದ ನಿವೃತ್ತ ಮ್ಯಾಜಿಸ್ಟ್ರೇಟ್ ಶ್ರೀ ಆರ್. ವೆಂಕೋಬರಾಯರು ಮಾತನಾಡಿದರು. ಶ್ರೀ ಸ್ವಾಮೀಜಿಯವರನ್ನು ಬಂಧಿಸಿದ್ದನ್ನು ಖಂಡಿಸಿ ಕೂಡಲೇ ಬಿಡುಗಡೆ ಮಾಡಬೇಕೆಂದು ವೈಸರಾಯರಿಗೆ, ಪಂ॥ ನೆಹರೂರವರಿಗೆ ತಂತಿ ಕೊಡಲಾಯಿತು.

[ನಾಳೆ ಪತ್ರಿಕೆಯಲ್ಲಿ ಮುಂದುವರಿಯುವುದು]

ಇಂದಿನ ವರ್ತಮಾನ

ಕಲ್ಕತ್ತಾ, ಮೆ 20 — ಈ ದಿವಸ ಏಳು ದುರಂತಗಳು ನಡೆದವೆಂದು ವರದಿಯಾಗಿದೆ. ಈ ಸಂದರ್ಭದಲ್ಲಿ 3 ವ್ಯಕ್ತಿ ಸತ್ತರೆಂದೂ, 49 ಮಂದಿ ಗಾಯಗೊಂಡರೆಂದೂ ಹೇಳಲಾಗಿದೆ.

ಕಲ್ಕತ್ತಾದಲ್ಲಿ ಗಲಭೆ ನಡೆದ ಕೆಲವು ಭಾಗದಲ್ಲಿನ ಜನರ ಮೇಲೆ 61300 ರೂ. ಪುಂಡುಗುದ್ರಾಯ ವಿಧಿಸಲಾಗಿದೆ ಹೌರಾದಲ್ಲಿ ರೈಲಿನ ಮೇಲೆ ಬಾಂಬು ಎಸೆದುಲ್ಪಟ್ಟ ಸಂದರ್ಭಕ್ಕಾಗಿ ಪೋಲೀಸರು ಗಲಭೆಕಾರರ ಮೇಲೆ ಗುಂಡುಹಾರಿಸಿದರು. ಇಬ್ಬರು ಗಾಯಗೊಂಡರು. 32 ಮಂದಿ ದಸ್ತಗಿರಿಯಾಗಿದ್ದಾರೆ.

ಕಲ್ಕತ್ತಾ, ಮೆ 20 — ಮೆ 10 ರಿಂದ ತಾತ್ಕಾಲಿಕವಾಗಿ ಸಕ್ಕರೆ ಸರಬರಾಜು ಸುಮಾರು ಸಾವಿರ ಪಿಂಡಾಯಿ ಅಂಗಡಿಗಳಿಗೆಕಪ್ಪಿಸಲಾಗಿ ಅವೆಲ್ಲಾ ಬಾಗಿಲು ಮುಚ್ಚಿವೆ

ತಿರುಪತಿ ದೇವಾಲಯಕ್ಕೆ ಹರಿಜನ ಪ್ರವೇಶ ಸಂಬಂಧದ ಮೊಖದ್ದಮೆಯಲ್ಲಿ ಹೈಕೋರ್ಟಿನವರು ಇಂಜಂಕ್ಷನ್ ಕೊಟ್ಟಿದ್ದಾರೆ

ಇದರ ಮೇಲೆ ಫೆಡರಲ್ ಕೋರ್ಟಿಗೆ ಅಪೀಲು ಮಾಡಲು ಅಪ್ಪಣೆ ಕೊಡಲ್ಪಡಲಿಲ್ಲ. (ಮೆ 21)

ಲಂಡನ್, ಮೆ 20— ಬರ್ಮಾದಲ್ಲಿ ಜನಾನೀಯರನ್ನು ತಡೆಗಟ್ಟಲು ಜಪಾನರು ತಾವು ಆಗ ಉಪಯೋಗಿಸುತ್ತಿದ್ದ ಯುಾಸಿಯುಸ್ ಜಾಕ್ ಬಾವುಟವನ್ನು ಒಂದು ಕಂಡಿಯಲ್ಲಿ ರಾಜರಿಗೆ ಕಾಣಿಕೆಯಾಗಿ ಒಪ್ಪಿಸಲಾಯಿತು

ಸವದೆಹಲಿ, ಮೆ 20 — ಭಾರತದ ಎಂಡು ಡೊಮಿನಿಯನ್ ಮಂತ್ರಿಮಂಡಲಗಳೂ ಒಬ್ಬ ಗವರ್ನರ್ ಜನರಲ್ ಕೈಕೆಳಗೆ ಸ್ಥಾಪಿಸಲು ತತ್ಕಾಲ ಸರ್ಕಾರದ ಸೂಚನೆಯೆಂದು ತೋರಲಾಗಿದೆ.

ಕಲ್ಕತ್ತಾ ಮೇ 20— ಉತ್ತರ ಕಲ್ಕತ್ತಾದ ಒಂದು ಕಡೆ 3500 ತೋಲ (ರೂ. 350000 ಬೆಲೆ ಬಾಳುವ) ಚಿನ್ನವನ್ನು ದರೋಡೆ ಮಾಡಲಾಗಿದೆ. ಬೊಂಬಾಯಿನಿಂದ ತರಲ್ಪಟ್ಟ ಈ ಭಂಗಾರವನ್ನು ಏಮಾರಿಸಿ ನಿಲ್ದಾಣದಿಂದ ಯಜಮಾನನು ತನ್ನ ಮನೆಗೆ ಜೀಪ್‌ನಲ್ಲಿ ತೆಗೆದುಕೊಂಡು ಹೋಗುತ್ತಿದ್ದಾಗ ಎದುರಿಗೆ ಮತ್ತೊಂದು ಜೀಪಿನಲ್ಲಿ ಇಬ್ಬರು ಬಂದು ತುಪಾಕಿಯಿಂದ ಬೆದರಿಸಿ ಭಂಗಾರ ತುಂಬಿದ್ದ ಪೆಟ್ಟಿಗೆಯೊಂದಿಗೆ ಪರಾರಿಯಾದರು.

ಇಟಲಿ ದೇಶದ ಪುನರ್ರಚನೆಗೆ ಬ್ರಿಟ್ ಸಹಾಯ

ಭಾರತ ಸರ್ಕಾರದ ರೈಲ್ವೆ ಮಂತ್ರಿ ಡಾ॥ ಮಾಥಾಯ್ ಬೊಂಬಾಯಿನಲ್ಲಿ ಮುಂದಿನ ವಾರ 10 ರಲ್ಲಿ ಭಬ್ಬಲ್‌ಬಾದರು ಯೋಜನೆ ಸಮ್ಮೇಳನದಲ್ಲಿ ಅಧ್ಯಕ್ಷತೆ ವಹಿಸುವರು ನಮ್ಮ ದಿವಾನರೂ ಭಾಗವಹಿಸುವರು

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ಸೋವಿಯಾದ ಪಂಚಿಕೆ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ1--12--0

ಅಕ್ಕರ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

'ಶಕ್ತಿಸುಧಾ' ಸೇವಿಸಿ ಶಕ್ತಿಯನ್ನು ಹೊಂದಿ

ಗ್ರೈಪ್ ಸಿರಪ್

ಟ್ರೇಡ್ ITL ಮಾರ್ಕ್

ಎಳೆಯ ಮಕ್ಕಳ ಜೀರ್ಣಶಕ್ತಿಯನ್ನು ಬಲಪಡಿಸುವ ಪದಾರ್ಥ. ಗ್ರೈಪ್ ಸಿರಪ್ ರುಚಿ ಸಹಿಯಾಗಿಯೂ ಮತ್ತು ಆಹ್ಲಾದ ಉಂಟುಮಾಡುವುದಾಗಿಯೂ ಇರುವುದರಿಂದ ಮಕ್ಕಳ ಸೇವನೆಗೆ ಅನುಕೂಲವಾದುದು.

ಪ್ರತಿಯೊಬ್ಬ ತಾಯಿಯೂ ಮನೆಯಲ್ಲಿ ಈ ಷಂಬತ್ತಿನ ಸೀಸೆ ಒಂದನ್ನು ಯಾವಾಗಲೂ ಕೈಗಾವಲಾಗಿಟ್ಟಿರುವುದು ಅತ್ಯವಶ್ಯಕ.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd..

Malleswaram P. O. Bangalore

Edited, Printed and Published by M. S Krishna Rao at the Satyavadi Press Chamaraj Agrahar, Mysore.

At Opera

5 ನೇ ವಾರ

ಟಿ. ಎಸ್. ಬಾಲಯ್ಯ,

ತಪಮಣಿದೇವಿ, ಮಾಲತಿ,

ರಾಮುಚಂದ್ರ ನಟಿಸಿರುವ

ರಾಜಕುಮಾರಿ

(ತಮಿಳು)

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೆಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಅರಿಸಿ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ. ಎಂದು ಶಿಪಾರಸ್ ಮಾಡಲ್ಪಟ್ಟಿದೆ.

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು.